ಓ ಎಸ್ ನಂಃ 1/2023

ಡಿ. ಡಬ್ಲ್ಯೂ-1

**(ಇಂದು ದಿನಾಂಕ 10-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀಸವಾಲುಃ ವಾದಿ ಪರ ಶ್ರೀಮತಿ ಎಸ್ ಎನ್ ಎ ವಕೀಲರಿಂದ**

ನಾನು ಕೆ ಎಸ್ ಆರ್ ಟಿ ಸಿ ಯಲ್ಲಿ ಚಾಲಕ ವ ನಿರ್ವಾಹಕನಾಗಿ ಕೆಲಸ ಮಾಡುತ್ತಿದ್ದೆನೆ . ನೀವು ಕೆಲಸಕ್ಕೆ ರಾತ್ರಿ ಹೋದರೆ ಬೆಳಗೆಗ ಬರುತ್ತಿರಿ ಎಂದರೆ ಸರಿ . ನಾನು ಈ ಮೊದಲು ಬೇರೆ ಕಡೆ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ . ನಾನು ನನ್ನ ಹೆಂಡತಿ , ಮಕ್ಕಳ ಜೊತೆ ಬೇರೆ ಕಡೆ ಇದ್ದು ನನ್ನ ತಾಯಿಯ ಜೊತೆ ಇರಲಿಲ್ಲ ಎಂದರೆ ಸರಿಯಲ್ಲ . ನಾನು ಮತ್ತಿಪ್ಲಾಟನಲ್ಲಿ ನೆಲೆಸಿದ್ದರೂ ಸಹ ನನ್ನ ತಾಯಿಯ ಜೊತೆ ಇರುವುದಾಗಿ ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ . ನನ್ನ ತಾಯಿ ವಾದಿಯ ಜೊತೆ ವಾದಿಯ ಮನೆಯಲ್ಲಿ ಇದ್ದರೂ ಸಹ ಈ ವಿಷಯ ನನಗೆ ಗೊತ್ತಿದ್ದರೂ ಸಹ ವಾದಿಯ ಜೊತೆ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ .

ನನ್ನ ತಂದೆಯವರು ಯುನಿವರ್ಸಿಟಿಯ ಪಬ್ಲಿಕ್ ಸ್ಕೂಲಿನಲ್ಲಿ ಪ್ರೌಂಶುಪಾಲರು ಆಗಿದ್ದರು ಎಂದರೆ ಸರಿ . ನನ್ನ ತಂದೆ ಯಾವಾಗ ಮರಣ ಹೊಂದರು ಎಂದು ನನಗೆ ಗೊತ್ತಿಲ್ಲ . ನನ್ನ ತಂದೆಯ ಮರಣದ ಬಳಿಕ ಅವರ ಪಿಂಚಣಿ ವಗ್ಯೆರೆ ಹಣ ನನ್ನ ತಾಯಿಗೆ

ಬಂತು ಎಂದರೆ ಸರಿ . ನಾನು ನನ್ನ ಚಟಕ್ಕೆ ದುರ್ಬಳಕೆ ಮಾಡಿಕೊಳ್ಳಲು ನನ್ನ ತಾಯಿಗೆ ಹೊಡೆ ಬಡೆ ಮಾಡಿ ಹಣ ಕಿತ್ತುಕೊಂಡಿದ್ದೆನೆ ಎಂದರೆ ಸರಿಯಲ್ಲ .

2012 ರಲ್ಲಿ ನನ್ನ ತಾಯಿಗೆ ಕ್ಯಾನ್ಸರ ಖಾಯಿಲೆ ಆಗಿತ್ತು ಎಂದರೆ ಸರಿ . ನನ್ನ ತಾಯಿಯನ್ನು ನವನಗರದ ಕ್ಯಾನ್ಸರ ಆಸ್ಪತ್ರೆ ಹಾಗೂ ಧಾರವಾಡದ ರಾಮನಗೌಡ ಆಸ್ಪತ್ರೆಯಲ್ಲಿ ಹಾಗೂ ಹುಬ್ಬಳ್ಳಿಯ ದೇಶಪಾಂಡೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದೆವು . ನನ್ನ ತಾಯಿಗೆ ಚಿಕಿತ್ಸೆಯನ್ನು ವಾದಿ ಮಾತ್ರ ಕೊಡಿಸಿದ್ದು ನಾನು ಯಾವುದೇ ರೀತಿಯಲ್ಲಿ ಚಿಕಿತ್ಸೆ ಕೊಡಿಸಿಲ್ಲ ಎಂದರೆ ಸರಿಯಲ್ಲ . ನಿಮ್ಮ ತಾಯಿಗೆ ವಿವೇಕಾನಂದ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಆಗಿದ್ದು ಆದರೆ ಬೇರೆ ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದಿರಿ ಎಂದರೆ ಸಾಕ್ಷಿಯು ಹೌದು ನಾನೇ ಡಿಸಚಾರ್ಜ ಮಾಡಿಸಿಕೊಂಡು ಬಂದಿದ್ದೆನೆ ಎಂದು ಹೇಳುತ್ತಾರೆ . ಈ ಕುರಿತಾದ ದಾಖಲೆಗಳು ನನ್ನಲ್ಲಿ ಇದೆ . ನಾನು ನನ್ನ ತಾಯಿಗೆ ಚಿಕಿತ್ಸೆ ಕೊಡಿಸಿದ ಕಾರಣ ನನ್ನ ತಾಯಿಗೆ ಇರುವ ಖಾಯಿಲೆ ಯಾವ ಸ್ವರೂಪದ ಚಿಕಿತ್ಸೆ ಕೊಡುತ್ತಿದ್ದರು ಎಂದು ನನಗೆ ತಿಳಿದಿಲ್ಲ ಎಂದರೆ ಸರಿಯಲ್ಲ . ನಿಮ್ಮ ತಾಯಿಗೆ ಕಿಮೋಥೇರಪಿ ಮಾಡಿಸಲು ನೀವು ಆಸ್ಪತ್ರೆಗೆ ಹೋಗಿಲ್ಲ ಎಂದರೆ ಸಾಕ್ಷಿಯು ಉತ್ತರಿಸುವುದಿಲ್ಲ .

ಓ ಎಸ್ ನಂಃ 1/2023
ಡಿ. ಡಬ್ಲ್ಯೂ-1

ಪ್ರತಿವಾದಿ ನಂಃ 1 ರವರು ಮಾನಸಿಕ ಖಾಯಿಲೆಯಿಂದ ಬಳಲುತ್ತಿದ್ದಾರೆ ಎಂದರೆ ಸರಿ . ಸಾಕ್ಷಿಯು ನಾನೇ ಚಿಕಿತ್ಸೆ ಕೊಡಿಸುತ್ತಿದ್ದೆನೆ ಎಂದು ಹೇಳುತ್ತಾರೆ . 1 ನೇ ಪ್ರತಿವಾದಿ ಮಾನಸಿಕ ಖಾಯಿಲೆಯಿಂದ ಬಳಲುತ್ತಿದ್ದ ಕಾರಣ ಅವರು ನ್ಯಾಯಾಲಯದಲ್ಲಿ ಸಾಕ್ಷಿ ನೀಡಲು ಸಮರ್ಥರಿಲ್ಲ ಎಂದರೆ ಸರಿಯಲ್ಲ . ಪ್ರತಿವಾದಿ ಪರ ಸಲ್ಲಿಸಲಾದ ಕೈಫಿಯತ್ ಅನ್ನು ನಾನೇ ನನಗೆ ಅನುಕೂಲವಾಗುವ ರೀತಿಯಲ್ಲಿ ತಯಾರಿಸಿಕೊಂಡು ಸಲ್ಲಸಿದ್ದೆನೆ ಎಂದರೆ ಸರಿಯಲ್ಲ .

**ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀಸವಾಲನ್ನು ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾಹಾಗೂ ಸಿಜೆಎಂ, ಧಾರವಾಡ.